**ದಿಃ-14-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು ಃ ಪ್ರತಿವಾದಿಗಳ ಪರ ಶ್ರೀ. ಸಿ.ಪಿ ವಕೀಲರಿಂದ ಃ**

13. ನಿ.ಪಿ.3 ರ ನೋಟೀಸಿನ ಪ್ಯಾರಾ ನಂ.3 ರಲ್ಲಿ ದಿನಾಂಕ 04.06.2013 ರಂದು ಒಂದು ಕರಾರು ಪತ್ರ ಆಗಿದೆ ಎಂದು ನಾನು ಹೇಳಿದ್ದು ಅದಕ್ಕೆ ಯಾರು ಸಾಕ್ಷಿದಾರರು ಎಂದು ನನಗೆ ನೆನಪಿಲ್ಲ. ದಿನಾಂಕ 04.06.2013 ರ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದೇ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಿನಾಂಕ 04.06.2013 ರ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

14. ವೇದಾಚಲಂ ಅವರು 1978 ರಲ್ಲಿ ದಾವಾ ಜಾಗವನ್ನು ಭೋಗ್ಯಕ್ಕೆ ತೆಗೆದುಕೊಂಡಿದ್ದರು. 2.5 ಚದರವನ್ನು ವೇದಾಚಲಂ ಅವರು ಭೋಗ್ಯಕ್ಕೆ ತೆಗೆದುಕೊಂಡಿದ್ದರು. ಸಾಕ್ಷಿ ಮುಂದುವರಿದು 2.5-3 ಚದರ ತೆಗೆದುಕೊಂಡಿರಬಹುದು ಎಂದು ನುಡಿಯುತ್ತಾರೆ. ಸದರಿ ಭೋಗ್ಯ ಪತ್ರವನ್ನು ನಾನು ನೋಡಿದ್ದೇನೆ ಆದರೆ ಅದನ್ನು ಹಾಜರುಪಡಿಸಲಾಗುವುದಿಲ್ಲ. ಸಾಕ್ಷಿ ಮುಂದುವರಿದು ಕರಾರು ಪತ್ರ ಮಾಡುವ ಸಂದರ್ಭದಲ್ಲಿ ಸದರಿ ಪತ್ರವನ್ನು ವೇದಾಚಲಂ ಅವರು ತ್ಯಾಗರಾಜು ಹಾಗೂ ಅವರ ತಾಯಿಗೆ ಅದನ್ನು ವಾಪಾಸು ನೀಡಿದ್ದರು ಎಂದು ನುಡಿಯುತ್ತಾರೆ. ಕರಾರು ಪತ್ರದಲ್ಲಿ ಭೋಗ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಬರೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದರಲ್ಲಿ ಉಲ್ಲೇಖಿಸಿಲ್ಲ ಎಂದು ನುಡಿಯುತ್ತಾರೆ.

15. ದಿನಾಂಕ 15.11.2024 ರಂದು ನಾನು ವೇದಾಚಲಂ ಅವರ ವೈದ್ಯಕೀಯ ಚಿಕಿತ್ಸೆಯ ಬಾಬ್ತು ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ಹೇಳಿದ್ದು ಅವುಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅವುಗಳು ಅಗತ್ಯ ಇಲ್ಲ ಎಂದು ನಾನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಅದೇ ದಿನಾಂಕದಂದು ನಾನು ಬಾಬು ಅವರು ವಾದ ಪತ್ರದ ಸ್ವತ್ತಿನ ಒಂದು ಭಾಗದಲ್ಲಿ ಬಂದು ಇದ್ದ ಬಗ್ಗೆ ನಮ್ಮ ಹತ್ತಿರ ಪತ್ರ ಇದೆ ಮತ್ತು ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದು ಹೇಳಿದ್ದು ಅದನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಬಾಬು ಅವರೇ ನ್ಯಾಯಾಲಯಕ್ಕೆ ಬರುತ್ತಾರೆ ಎಂದು ನುಡಿಯುತ್ತಾರೆ.

16. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.7 ರಲ್ಲಿ ನಾನು ಬಾಬು ಅವರು 8*8 ಅಡಿ ಜಾಗದಲ್ಲಿ ಭೋಗ್ಯದ ಅಡಿಯಲ್ಲಿ ಇದ್ದಾರೆ ಎಂದು ಹೇಳಿದ್ದು ಅವರು ಎಷ್ಟು ವರ್ಷದಿಂದ ಅಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.5 ರಲ್ಲಿ ನಾನು ಕ್ರಯದ ಕರಾರು ಪತ್ರ ದಿನಾಂಕ 01.07.2015 ರಂದು ಆಗಿದೆ ಎಂದು ಹೇಳಿದ್ದು ಪ್ಯಾರಾ ನಂ.16 ರಲ್ಲಿ ದಿನಾಂಕ 07.07.2015 ರಂದು ಆಗಿದೆ ಎಂದು ಹೇಳಿದ್ದೇನೆ ಎರಡೂ ತಾರೀಖುಗಳಲ್ಲಿ ಯಾವುದು ಸರಿ ಎಂದರೆ ಸಾಕ್ಷಿ ನನಗೆ ದಿನಾಂಕ ನೆನಪಿಲ್ಲ ಆದರೆ 2015 ಎಂದು ಮಾತ್ರ ನೆನಪಿದೆ ಎಂದು ನುಡಿಯುತ್ತಾರೆ. ನನಗೆ ದಿನಾಂಕ ಸರಿಯಾಗಿ ನೆನಪಿಲ್ಲದ ಕಾರಣ ಏನೇನು ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

17. ಕಳೆದ 8 ರಿಂದ 10 ವರ್ಷದಿಂದ ದಾವಾ ಆಸ್ತಿ ಖಾಲಿ ಇದೆ. ಕಳೆದ 8 ರಿಂದ 10 ವರ್ಷದಿಂದ ದಾವಾ ಆಸ್ತಿ ಖಾಲಿ ಇದ್ದ ಕಾರಣ ವೇದಾಚಲಂ ಅವರು ಯಾವ ವರ್ಷದಿಂದ ಯಾವ ವರ್ಷದವರೆಗೆ 2.5 ಚದರ ಜಾಗದಲ್ಲಿ ಭೋಗ್ಯಕ್ಕೆ ಇದ್ದರು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಕ್ರಯದ ಕರಾರು ಪತ್ರಕ್ಕೆ ಧನರಾಜು ಅವರು ಸಹ ಸಾಕ್ಷಿಯಾಗಿದ್ದು ಅವರೂ ಸಹ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುತ್ತಾರೆ. ಧನರಾಜು ಅವರು ದಾವಾ ಸ್ವತ್ತಿನ ಒಂದು ಭಾಗದಲ್ಲಿ ಕಚೇರಿ ಇಟ್ಟುಕೊಂಡಿದ್ದು ಅವರನ್ನು ಅಲ್ಲಿಂದ ನ್ಯಾಯಾಲಯದ ಆದೇಶದ ಪ್ರಕಾರ ಉಚ್ಚಾಟಣೆ ಮಾಡಲಾಗಿತ್ತು ಎಂದರೆ ಧನರಾಜು ಅವರು ದಾವಾ ಸ್ವತ್ತಿನ ಒಂದು ಭಾಗದಲ್ಲಿ ಇದ್ದರು ಆದರೆ ಅವರನ್ನು ಯಾವ ರೀತಿಯಾಗಿ ಉಚ್ಚಾಟಣೆ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

18. 1 ಹಾಗೂ 2 ನೇ ಪ್ರತಿವಾದಿಗಳಿಗೆ ನಿ.ಪಿ.2 ರಂತೆ ಕರಾರು ಪತ್ರ ಮಾಡಿಕೊಡುವ ಉದ್ದೇಶವೇ ಇದ್ದಿರಲಿಲ್ಲ ವಾದಿ ಹಾಗೂ ನಿ.ಪಿ.2 ರ ಸಾಕ್ಷಿದಾರರು ಸೇರಿಕೊಂಡು ನಿ.ಪಿ.2 ರ ದಾಖಲೆಯನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.2 ರ 1 ನೇ ಸಾಕ್ಷಿದಾರ ಮೋಹನ್ ಬದುಕಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅವರ ಪರಿಚಯ ನನಗೆ ಇದೆ. ಅವರು ಸಹ ನ್ಯಾಯಾಲಯಕ್ಕೆ ಬಂದು ಈ ದಾವೆಯಲ್ಲಿ ಸಾಕ್ಷಿದಾರರಾಗಿ ಸಾಕ್ಷಿ ನೀಡಬಹುದು ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

19. ಕರಾರು ಪತ್ರ ಆಗುವ ಸಂದರ್ಭದಲ್ಲಿ ದಾವಾ ಸ್ವತ್ತು ವೇದಾಚಲಂ ಅವರ ಸ್ವಾಧೀನದಲ್ಲಿತ್ತು. ನಿ.ಪಿ.2 ರಲ್ಲಿ ಸ್ವಾಧೀನದ ಬಗ್ಗೆ ಇರುವ ಉಲ್ಲೇಖ ಸರಿಯಾಗಿದೆಯಾ ಎಂದರೆ ಸರಿ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು 3 ನೇ ಪ್ರತಿವಾದಿಗೆ ಮಾರಾಟ ಆಗಿದೆ ಎಂದು ನನಗೆ 2017-18 ರ ಸಮಯಕ್ಕೆ ಗೊತ್ತಾಯಿತು. ಈ ದಾವೆ ಸಲ್ಲಿಸುವ ಸಂದರ್ಭದಲ್ಲೇ 3 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ದಾಖಲಾತಿ ಸಿಕ್ಕಿರಲಿಲ್ಲ ಎಂದು ನುಡಿಯುತ್ತಾರೆ. ನನಗೆ ಯಾವ ತಾರೀಖಿನಂದು ನಿಖರವಾಗಿ 3 ನೇ ಪ್ರತಿವಾದಿಗೆ ಮಾರಾಟ ಆಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ. ಅದೇ ರೀತಿ ಯಾವ ತಾರೀಖಿನಂದು ನನಗೆ ದಾಖಲಾತಿಗಳು ಸಿಕ್ಕಿವೆ ಎಂದೂ ಸಹ ನನಗೆ ಮಾಹಿತಿ ಇಲ್ಲ. 2017-18 ನೇ ಇಸವಿಯಲ್ಲಿ ನನಗೆ 3 ನೇ ಪ್ರತಿವಾದಿಗೆ ದಾವಾ ಸ್ವತ್ತು ಮಾರಾಟ ಆಗಿದೆ ಎಂದು ತಿಳಿದ ನಂತರ ಅವರಿಗೆ ನೋಟೀಸು ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಮಗೆ ಚೆನ್ನಮ್ಮ ಹಾಗೂ ತ್ಯಾಗರಾಜು ಅವರು ಕ್ರಯದ ಕರಾರು ಪತ್ರ ಮಾಡಿಕೊಟ್ಟ ನಂತರ ಅವರಿಗೆ ಮಾತ್ರ ನೋಟೀಸು ನೀಡಬೇಕು ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಗೆ ದಾವಾ ಸ್ವತ್ತು ಮಾರಾಟ ಆಗಿದೆ ಎಂದು ನನಗೆ ಗೊತ್ತಾದ ಮೇಲೂ ಸಹ ನಿ.ಪಿ.2 ರಂತೆ ಕರಾರು ಪತ್ರವನ್ನು ಸೃಷ್ಟಿ ಮಾಡಿ ಒಂದು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

20. ನಿ.ಪಿ.2 ರ ಡಾಕ್ಯುಮೆಂಟ್ ಶೀಟನ್ನು ಚೆನ್ನಮ್ಮ ಅವರೇ ಖರೀದಿಸಿದ್ದರು. ನಿ.ಪಿ.2 ರಲ್ಲಿ ಇದೇ ಎಂದು ಹೇಳಲಾಗುವ ಚೆನ್ನಮ್ಮ ಅವರ ಎಡಗೈ ಹೆಬ್ಬೆರಳಿನ ಗುರುತನ್ನು ಯಾರು ಗುರುತಿಸಿದ್ದಾರೆ ಎಂದರೆ ಸಾಕ್ಷಿ ಕ್ರಯದ ಕರಾರು ಪತ್ರದಲ್ಲಿ ಯಾರೂ ಗುರುತಿಸಬೇಕಾಗಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.2 ರ ದಾಖಲೆಗೆ ಚೆನ್ನಮ್ಮ ಎಡಗೈ ಹೆಬ್ಬೆರಳಿನ ಗುರುತನ್ನು ಹಾಕುವ ಸಂದರ್ಭದಲ್ಲಿ ನಾನು ಇರಲಿಲ್ಲ.

21. ನನ್ನ ಮುಖ್ಯ ವಿಚಾರಣೆಯಲ್ಲಿ ತೋರಿಸಿದ ತೋಳಪಳ್ಳಿ ಬಾಗೇಪಲ್ಲಿ ತಾಲೂಕು, ಚಿಕ್ಕಬಳ್ಳಾಪುರವೇ ನನ್ನ ವಿಳಾಸ ಆಗಿದೆ. ಸಾಕ್ಷಿ ಮುಂದುವರಿದು ನಾನು ಬೆಂಗಳೂರಿನಲ್ಲಿಯೂ ಸಹ ಹೆಚ್ಚಾಗಿ ಇರುತ್ತೇನೆ ಎಂದು ನುಡಿಯುತ್ತಾರೆ. ಬೆಂಗಳೂರಿನಲ್ಲಿ ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ.

22. ದಾವಾ ಸ್ವತ್ತಿಗೆ ಸಂಬಂಧಿಸಿದಂತಹ ಮೂಲ ದಾಖಲೆಗಳನ್ನು ನಾನು ನೋಡಿದ್ದೇನಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

23. ವೇದಾಚಲಂ ಅವರು ಏನು ವ್ಯವಹಾರ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಅವರು ನನ್ನ ಸ್ನೇಹಿತರು. ವೇದಾಚಲಂ ಅವರೂ ಸಹ ನನ್ನ ರೀತಿಯಲ್ಲಿ ರಿಯಲ್ ಎಸ್ಟೇಟ್ ಮಾಡುತ್ತಾರಾ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

24. ವೇದಾಚಲಂ ಅವರು ಹಾಸಿಗೆ ಹಿಡಿದಿಲ್ಲ. ತಕ್ಕಮಟ್ಟಿಗೆ ಅವರು ಮನೆಯ ಸುತ್ತಮುತ್ತ ಓಡಾಡುವಷ್ಟು ಶಕ್ತಿ ಇದೆ. ಸಂಪಂಗಿರಾಮನಗರ ನ್ಯಾಯಾಲಯದ ಪಕ್ಕದಲ್ಲೇ ಇರುವ ಕಾರಣ ಅವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ವೇದಾಚಲಂ ಅವರ ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲು ಆಗುತ್ತದೆಯೇ ಎಂದರೆ ಬೇಕಾದರೆ ಹಾಜರುಪಡಿಸಬಹುದು ಎಂದು ನುಡಿಯುತ್ತಾರೆ.

25. ನನಗಾಗಲೀ ವೇದಾಚಲಂ ಅವರಿಗಾಗಲೀ ದಾವಾ ಸ್ವತ್ತಿನಲ್ಲಿ ಯಾವುದೇ ವೈಯುಕ್ತಿಕ ಹಿತಾಸಕ್ತಿ ಇಲ್ಲದಿದ್ದರೂ ಸಹ 3 ನೇ ಪ್ರತಿವಾದಿ ತಾನು ಸಂಪೂರ್ಣ ಪ್ರತಿಫಲ ನೀಡಿ ಖರೀದಿಸಿದ್ದ ಜಾಗಗಳನ್ನು ಲಪಟಾಯಿಸುವ ಉದ್ದೇಶದಿಂದ ಈ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ</u> ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಪ್ರಶಾಂತಿ.ಜಿ)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**